ಅಧ್ಯಕ್ಷರು: ಆಯಿತು. ಗೋವಿಂದ ಕಾರಜೋಳರವರು ಉತ್ತರ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಮತ್ತು ಕನ್ನಡ ಹಾಗೂ ಸಂಸ್ಕೃತಿ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ಯಾವ ರೈತರಿಗೆ ಸರ್ಕಾರದಿಂದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲವೋ, ಅಂತಹ ಕಡೆ ರೈತರು 8 ಕಿ.ಮೀ, 6 ಕಿ.ಮೀ., 10 ಕಿ.ಮೀ. 15 ಕಿ.ಮೀ., ವರೆಗೂ ತಮ್ಮ ಸ್ವಂತ ಖರ್ಚಿನಲ್ಲಿ ಪೈಪ್‌ಲೈನ್ ಮಾಡಿ, ಆ ಕ್ಷೇತ್ರಕ್ಕೆ ಬೇಕಾಗುವಂತಹ ಎಷ್ಟು ಹೆಚ್.ಪಿ. ಮೋಟಾರ್ ಬೇಕಾಗುತ್ತದೆ ಅಷ್ಟು ಹೆಚ್.ಪಿ. ಮೋಟಾರ್ ಕೂಡಿಸಿ ನೀರನ್ನು ತೆಗೆದುಕೊಂಡಿದ್ದಾರೆ. (ಗೊಂದಲ) ಸ್ವಲ್ಪ ಶಾಂತರಾಗಿ. ನಿಮಗೆ ಎಲ್ಲರಿಗೂ ಸಹ ಬಂದಿದೆ. ಮಾನ್ಯ ಅಧ್ಯಕ್ಷರೆ, ಅವರ ಹೊಲದ ಮೇಲೆ ಸಾಲ ಮಾಡಿ, ಅವರ ಸ್ವಂತ ಖರ್ಚಿನಿಂದ, ಬ್ಯಾಂಕಿನಲ್ಲಿ ಬೋಜಾ ಕೂಡಿಸಿಕೊಂಡು ನೀರಾವರಿ ಮಾಡಿಕೊಂಡಿದ್ದಾರೆ. ಅವರ ಬೇಡಿಕೆ ಇಷ್ಟೆ ರಾಜು ಗೌಡರು ಪ್ರಸ್ತಾಪ ಮಾಡಿರುವಂತಹದ್ದು. ಪ್ರತಿಯೊಬ್ಬ ರೈತರಿಗೆ 10 ಹೆಚ್.ಪಿ ವರೆಗೂ ಪಂಪ್‌ಸೆಟ್‌ಗೆ free ವಿದ್ಯುತ್ತನ್ನು ನೀವು ಕೊಟ್ಟಿದ್ದೀರಿ. ಅದೇ ರೀತಿ ಈ ರೈತರಿಗೂ ಕೊಡಬೇಕು. ಅವರು ಸಮೂಹಿಕವಾಗಿ ಏತ ನೀರಾವರಿ ಮಾಡಿಕೊಂಡಿದ್ದರಿಂದ 10 ಹೆಚ್.ಪಿ.ಗಿಂತಲೂ ಹೆಚ್ಚಿನ ಮೋಟಾರ್‌ಗಳನ್ನು ಅಳವಡಿಸಿದ್ದಾರೆ. ಅದಕ್ಕಾಗಿ free ವಿದ್ಯುತ್ತು ಸಗಬೇಕು ಎನ್ನುವುದು ಅವರ ಬೇಡಿಕೆಯಿದೆ. ಮಾನ್ಯ ಅಧ್ಯಕ್ಷರೇ, ಅದನ್ನು ಸರ್ಕಾರ ಕೂಡಲೇ ಸಂಬಂಧಪಟ್ಟಂತಹ ಐದು Electricity Company ಗಳ ಸಭೆ ಕರೆದು ಒಂದು ಯೋಗ್ಯವಾದಂತಹ ನಿರ್ಣಯ ಕೈಗೊಂಡಿತು ರೈತರಿಗೆ ಇವತ್ತು ಏನು ಹೆಚ್ಚು ಹೊರೆಯಾಗುತ್ತಿದೆ, ಅವರಿಗೆ ಅದರ commercial rate ಬೀಳುತ್ತಿದೆ, 10 ಹೆಚ್.ಪಿ. ಗಿಂತಲೂ ಹೆಚ್ಚಿನ ಮೋಟಾರ್ ಇರುವುದರಿಂದ ಅವರಿಗೆ commercial rate ಬೀಳುತ್ತಿದೆ. ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ರೈತರಿಗೆ ಅಗತ್ಯಕ್ಕಂತಹ ಭಾರವನ್ನು ಕಡಿಮೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆ.

ಆ) **ವಿಷಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ ನೀಡುವ ಶಾಲಾಬ್ಯಾಗ್, ಪುಸ್ತಕ, ಪೆನ್ ಮುಂತಾದ ವಸ್ತುಗಳ ಖರೀದಿಯಲ್ಲಿ ಅವ್ಯವಹಾರವಾಗಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಮೋಸ ಮಾಡಿರುವ ಬಗ್ಗೆ.

ಶ್ರೀ ಗೂಳಿಹಟ್ಟ ಡಿ.ಶೇಖರ್ (ಹೊಸದುರ್ಗ): ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರವಾದ ಹೊಸದುರ್ಗ ನಗರದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ

ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತವಾಗಿ ನೀಡುವ ಶಾಲಾಬ್ಯಾಗ್, ಪುಸ್ತಕ,ಪೆನ್ ಮುಂತಾದ ವಸ್ತುಗಳ ಖರೀದಿಯಲ್ಲಿ ಅವ್ಯವಹಾರವಾಗಿದೆ. ಪುರಸಭೆಯಲ್ಲಿ ಸದಸ್ಯರಾಗಿ ಕೆಲಸ ಮಾಡುವಂತಹವರು ಅವರ ಮಗನ ಹೆಸರಿನಲ್ಲಿ ಕಂಪನಿ ಮಾಡಿ, ಅವರ ಹೆಂಡತಿ ಹೆಸರಿಗೆ ಸರ್ಕಾರದ ಚೆಕ್‌ಅನ್ನು ಬಳಸಿಕೊಂಡು ಮಕ್ಕಳಿಗೆ ಪುಸ್ತಕ, ಪೆನ್ ಕೊಡದೇ ಸರ್ಕಾರಕ್ಕೆ ವಂಚನೆ ಮಾಡಿದ್ದಾರೆ. ದಯವಿಟ್ಟು ಈ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಾಲಚಂದ್ರ ಜಾರಕಿಹೊಳಿ (ಪೌರಡಳಿತ ಸಚಿವರು): ಮಾನ್ಯ ಅಧ್ಯಕ್ಷರೆ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ಪುರಸಭೆಯ ವ್ಯಾಪ್ತಿಯಲ್ಲಿ 2007–08ನೇ ಸಾಲಿನಲ್ಲಿ ಶೇಕಡ 18 ಅನುದಾನದ ಯೋಜನೆಯಡಿಯಲ್ಲಿ ಸುಮಾರು ಒಂದು ಲಕ್ಷ ಅರವತ್ತೈದು ಸಾವಿರ ರೂಪಾಯಿಗಳ ವೆಚ್ಚದಲ್ಲಿ ಸ್ಕೂಲ್ ಬ್ಯಾಗ್, ಪುಸ್ತಕ, ಪೆನ್‌ಗಳನನು ತರಿಸಿದ್ದು , ಅವುಗಳು ಅಲ್ಲದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಇವುಗಳನ್ನು ನೀಡಲು ಕ್ಷೇತ್ರ ಶಿಕ್ಷಣಾಧಿಕಾರಿಗೆ ನೀಡಲಾಗಿತತು. ಸೊಳ್ಳೆ ಪರದೆಗೆ ಸುಮಾರು 20 ಸಾವಿರ ರೂಪಾಯಿಗಳು, ಸುಮಾರು 75 ಸಾವಿರ ರೂಪಾಯಿಗಳ ಮೊತ್ತದ ಮಂಚಗಳನ್ನು ಖರೀದಿ ಮಾಡಿ, ಅದರಂತೆ ಆದಿ ಜಾಂಬವ ವಿದ್ಯಾರ್ಥಿ ನಿಲಯಗಳಿಗೆ ಮತ್ತು ಬೋವಿ ಸಮಾಜದ ವಿದ್ಯಾರ್ಥಿ ನಿಲಯಗಳಿಗೆ ವಿತರಿಸಲಾಗಿದೆ. 2009–10 ಮತ್ತು 2010–11ನೇ ಸಾಲಿನಲ್ಲಿ ಶೇಕಡ 22.75 ರ ಯೋಜನೆಯಡಿಯಲ್ಲಿ ಯಾವುದೇ ಸ್ಕೂಲ್ ಬ್ಯಾಗ್‌ಗಳನ್ನು ಹಾಗೂ ಪುಸ್ತಕಗಳನನು ಖರೀದಿ ಮಾಡಿರುವುದಿಲ್ಲ. ಅದಕ್ಕೆ ಮಾನ್ಯ ಸದಸ್ಯರು ಏನು ಅವ್ಯವಹಾರವಾಗಿದೆ ಎಂದಿದ್ದಾರೆ, ಅಂತಹ ಯಾವ ವಿಷಯವೂ ಇನ್ನು ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ನಿಖರವಾದ ಯಾವುದಾದರೂ ಮಾಹಿತಿ ಇದ್ದರೆ ಮಾನ್ಯ ಸದಸ್ಯರು ಏನು ಅವ್ಯವಹಾರವಾಗಿದೆ ಎಂದಿದ್ದಾರೆ, ಅಂತಹ ಯಾವ ವಿಷಯವೂ ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಅಂತಹ ನಿಖರವಾದ ಯಾವುದಾದರೂ ಮಾಹಿತಿ ಇದ್ದರೆ ಮಾನ್ಯ ಸದಸ್ಯರು ಕೊಟ್ಟಿದ್ದೇ ಅದರೆ ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್: ಮಾನ್ಯ ಅಧ್ಯಕ್ಷರೆ, ಇಲ್ಲ ನನ್ನ ಮನವಿ ಇಷ್ಟೆ. ಆಗಿನ ಪುರಸಭೆ ಸದಸ್ಯರಾಗಿದ್ದರಂತಹ, 2007–08ರಲ್ಲಿ ಯಾರು ಪುರಸಭೆಯ ಸದಸ್ಯರಾಗಿದ್ದರೋ ಅವರು ಈಗ ಅಧ್ಯಕ್ಷರಾಗಿದ್ದಾರೆ. ಅವರು ತನ್ನ minor ಮಗನ ಹೆಸರಿನಲ್ಲಿ company form ಮಾಡಿಕೊಂಡು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ವಿದ್ಯಾರ್ಥಿಗಳಿಗೆ ಸರಬರಾಜು ಮಾಡುವಂತಹ ವಸ್ತುಗಳನ್ನು ಸರಬರಾಜು ಮಾಡದೇ ಒಂದು ಕಾಲು ಲಕ್ಷ

ರೂಪಾಯಿಗಳ ಹಣದ ಚೆಕ್‌ಅನ್ನು ಪುರಸಭೆಯಿಂದ ಅವರ ಹೆಂಡತಿಯ ಅಕೌಂಟ್‌ಗೆ ಹಾಕಿಕೊಂಡಿದ್ದಾರೆ. ಹೆಂಡತಿಯ ಹೆಸರಿನಲ್ಲಿ ಅದನ್ನು ಡ್ರಾ ಮಾಡಿದ್ದಾರೆ. ಒಂದು ಹಣವನ್ನು ದುರುಪಯೋಗ ಮಾಡಿಕೊಂಡಿರುವುದು, ಇನ್ನೊಂದು ಅಧಿಕಾರ ದುರುಪಯೋಗ ಮಾಡಿಕೊಂಡಿರುವುದು. ಎರಡೂ ಕೂಡ ಇಲ್ಲಿ ಆಗಿದೆ. ದಯವಿಟ್ಟು ಈ ಬಗ್ಗೆ ಒಮದು ಸರಿಯಾದ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿ ನನ್ನ ಮನವಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಜಿಲ್ಲಾಧಿಕಾರಿಯವರ ಮುಖಾಂತರ ಒಂದು ವರದಿಯನ್ನು ತರಿಸಿಕೊಂಡು ಮಾನ್ಯ ಸದಸ್ಯರು ಹೇಳಿದ ಹಾಗೆ ಆರೀತಿ ಏನಾದರೂ ಅವ್ಯವಹಾರವಾಗಿದ್ದರೆ, ತಪ್ಪಾಗಿದ್ದರೆ ಸರ್ಕಾರ ಅದರ ಬಗ್ಗೆ ಖಂಡಿತವಾಗಿ ಕ್ರಮ ತೆಗೆದುಕೊಳ್ಳತ್ತದೆ. ಎಂದು ಹೇಳಿ ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಅಮರೇಗೌಡ ಬಯ್ಯಾಪುರರವರ ಗಮನ ಸೆಳೆಯುವ ಸೂಚನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ತೋಟಗಾರಿಕಾ ಸಚಿವರ ಗಮನ ಸೇಯುತ್ತೇನೆ.

(ಗೊಂದಲ)

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ದಯವಿಟ್ಟು commitment ಮಾಡಿಸಿ.

ಅಧ್ಯಕ್ಷರು: ಇದು ಗಮನ ಸೆಳೆಯುವುದು.

ಶ್ರೀ ಗೂಳಿಹಟ್ಟಿ ಡಿ.ಶೇಖರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳುವುದಕ್ಕೆ ರೆಡಿ ಇದ್ದಾರೆ. ಒಂದು ನಿಮಿಷ.

ಅಧ್ಯಕ್ಷರು: ಹೇಳಿ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಎಷ್ಟು ದಿವಸ ಆಗುತ್ತದೆ ಎಂದು ಅವರು ಹೇಳಬಿಡಲಿ.

ಶ್ರೀ ಬಾಲಚಂದ್ರ ಜಾರಕಿಹೊಳಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ಹೇಳಿದ ಹಾಗೆ ವರದಿ ತರಿಸಿಕೊಂಡು ಒಂದು ತಿಂಗಳನಲ್ಲಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು: ಸರಿ ವಿರೋಧ ಪಕ್ಷದ ನಾಯಕರದು ಗಮನ ಸೆಳೆಯುವುದು ಇದೆ.